Sri M. N. NAGHNOOR.—There is said to be considerable traffic in view of the Madhavapura sugarcane farm.

Sri K. PUTTASWAMY.—What would be the cost of the bridge ?

Sri M. N. NAGHNOOR.—The rough estimate is of the order of Rs. 10 lakhs.

---

## OPENING OF A VETERINARY HOSPITAL AT ANANDUR VILLAGE IN ARKALGUD TALUK.

*Q.—1027. Sri PUTTE GOWDA (Arkalgud).—

Will the Government be pleased to state:—

whether they intend opening a Veterinary Hospital at Anandur Village, Ramanathapur Hobli in Arkalgud Taluk ?

*A.*—Sri MALI MARIAPPA [on behalf of Sri N. RACHIAH (Minister for Agriculture and Social Welfare)].—

No.

ಶ್ರೀ ಪುಟ್ಟೇಗೌಡ.—ಉತ್ತರದಲ್ಲಿ ಇಲ್ಲ ಎಂದು ಹೇಳಿದೆ. ಈ ಸ್ಥಳದಲ್ಲಿ ಜಾನುವಾರುಗಳ ಸಂಖ್ಯೆ ಎಷ್ಟಿತ್ತು ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಮಾಲೇ ಮರಿಯಪ್ಪ.—ಒಟ್ಟು 88,456 ಜಾನುವಾರುಗಳಿವೆ.

ಶ್ರೀ ಪುಟ್ಟೇಗೌಡ.—ಇಷ್ಟು ಜಾನುವಾರುಗಳಿದ್ದರೂ ಇಲ್ಲಿಗೆ ಪೆಟರ್ನರಿ ಆಸ್ಪತ್ರೆಯನ್ನು ಕೊಡಲು ಏನು ತೊಂದರೆಯಾಗಿದೆ ?

ಶ್ರೀ ಮಾಲ ಮರಿಯಪ್ಪ.—88,456 ಜಾನುವಾರುಗಳ ಸಂಖ್ಯೆ ಏನೋ ಇದೆ. 25,000 ಜಾನುವಾರುಗಳಿಗೆ ಒಂದು ಪೆಟರ್ನರಿ ಆಸ್ಪತ್ರೆಯನ್ನು ಕೊಡಬೇಕೆಂದು ಇದೆ. ಅದರಂತೆ ಅರಕಲಗೂಡು ತಾಲ್ಲೂಕಿನಲ್ಲಿ ಈಗಾಗಲೇ ನಾಲ್ಕು ಆಸ್ಪತ್ರೆಗಳನ್ನು ತೆಗೆದು ಕೆಲಸ ಮಾಡುತ್ತಿವೆ. ಅದಕ್ಕೋಸ್ಕರ 25,000 ದಷ್ಟು ಜನಸಂಖ್ಯೆ ಜಾಸ್ತಿ ಇದ್ದರೂ ಈಗಲೇ ಪುನಃ ಆಸ್ಪತ್ರೆಯನ್ನು ಕೊಡಲು ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪುಟ್ಟೇಗೌಡ.—88 ಸಾವಿರ ಸಂಖ್ಯೆಯಷ್ಟು ಜಾನುವಾರುಗಳು ಇದೆ ಎಂದು ಹೇಳಿರುವುದರಲ್ಲಿ ಆನಂದೂರಿನ ಸುತ್ತಮುತ್ತ ಇರುವ ಹತ್ತು ಮೈಲಿಗಳಲ್ಲಿ ಜಾನುವಾರುಗಳು ಹೆಚ್ಚಾಗಿರುವುದರಿಂದ ಇಲ್ಲಿ ಆಸ್ಪತ್ರೆಯನ್ನೇಕೆ ಕೊಡಬಾರದು ?

ಶ್ರೀ ಮಾಲ ಮರಿಯಪ್ಪ.—ಹತ್ತು ಮೈಲಿಗಳ ದೂರದ ಪ್ರಶ್ನೆಯಲ್ಲ. ರಾಮನಾಥಪುರದ ಆಸ್ಪತ್ರೆಯು ಕೇವಲ ಆರುಮೈಲಿಗಳ ದೂರದಲ್ಲಿರುವುದರಿಂದ, ಆನಂದೂರಿನ ಜನರು ಅದನ್ನು ಉಪಯೋಗ ಮಾಡಿಕೊಳ್ಳಬಹುದು.

ಶ್ರೀ ಪುಟ್ಟೇಗೌಡ.—ರಾಮನಾಥಪುರದ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದೆ ಕೆಲಸ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಮಾಲ ಮರಿಯಪ್ಪ.—ಅಲ್ಲಿಗೆ ಡಾಕ್ಟರನ್ನು ಕೂಡಲೇ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.